ದಿನಾಂಕ 01-12-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನನ್ನ ತಂದೆ ತಾಯಿ ಇಬ್ಬರೂ ಮರಣ ಹೊಂದಿರುತ್ತಾರೆ ಎಂದರೆ ಸರಿ. ನಾವು ಒಟ್ಟು 4 ಜನ ಸಹೋದರರು ಮತ್ತು ಒಬ್ಬ ಸಹೋದರಿ ಇರುತ್ತೇವೆ. ದಾವಾ ಆಸ್ತಿಯನ್ನು ಹೊರತುಪಡಿಸಿ ಉಳಿದ ಕುಟುಂಬದ ಆಸ್ತಿಗಳಲ್ಲಿ ಪಾಲುವಾಟ್ನ ಮಾಡಿಕೊಂಡಿರುತ್ತೇವೆ. ಆ ಕುರಿತು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ಮೌಕಿಕ ಪಾಲುವಾಟ್ನಿಯಾಗಿರುವುದಾಗಿ ನುಡಿಯುತ್ತಾರೆ. ದಾವಾ ಆಸ್ತಿಯ ಮೂಲ ವಿಸ್ತೀರ್ಣ 6 ಎಕರೆ ಇರುತ್ತದೆ. ಮೂಲತಃ 6 ಎಕರೆ 29 ಗುಂಟೆ ಇತ್ತು ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೂಲ ಮಾಲೀಕರು ಚನ್ನಪ್ಪ ವೀರಭದ್ರಪ್ಪ ಕರೂರು ಎಂದರೆ ಸರಿ.

2. ದಾವಾ ಆಸ್ತಿಯ ಖರೀದಿ ವಚನ ಪತ್ರ ದಿನಾಂಕ 08-05-2008 ರಲ್ಲಿ ಆಗಿರುತ್ತದೆ. ಸದರಿ ಖರೀದಿ ವಚನ ಪತ್ರದಂತೆ ಒಟ್ಟು ರೂ.1,25,000/- ಗಳ ಮುಂಗಡ ಹಣ ನೀಡಲಾಗಿತ್ತು. ಆ ಕುರಿತು ನಾನು ಖರೀದಿ ವಚನ ಪತ್ರದಲ್ಲಿ ಭಾಗವಹಿಸಿರುವುದಿಲ್ಲ ಆದರೆ ನನ್ನ ತಮ್ಮ ಖರೀದಿ ವಚನ ಪತ್ರ ಮಾಡಿಕೊಂಡಿರುತ್ತಾರೆ. ಸದರಿ ದಾಖಲೆಯನ್ನು ನಾನು ನೋಡಿರುವುದಿಲ್ಲ. ಸದರಿ ಪತ್ರದ ಸಮಯದಲ್ಲಿ ಮಲಕಪ್ಪ ಶಾಮನೂರು ಹಾಜರು ಇದ್ದರು. ಸದರಿ ವಿಷಯವನ್ನು ನನ್ನ ಅಣ್ಣ ನಾಗರಾಜ ರವರು ತಿಳಿಸಿರುತ್ತಾರೆ. ಆತನು ಈಗ ಮರಣ ಹೊಂದಿರುತ್ತಾರೆ. ಬೇರೆ ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ.

3. ಖರೀದಿ ವಚನ ಪತ್ರದಂತೆ ರೂ.5,55,000/- ಗಳಿಗೆ ಖರೀದಿ ಒಪ್ಪಂದ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಖರೀದಿ ವಚನ ಪತ್ರದ ದಿನಾಂಕದಂದು ಪ್ರತಿವಾದಿಯು ಸಾಕ್ಷಿದಾರರ ಸಮಕ್ಷಮ ರೂ.3,00,000/- ಮುಂಗಡ ಹಣ ನೀಡಿರುತ್ತಾರೆ ಎಂದರೆ ಸಾಕ್ಷಿಯು ಯಾವುದೇ ಉತ್ತರ ನೀಡಿರುವುದಿಲ್ಲ. ಬಾಕಿ ಹಣ ಪಾವತಿಸಿ ಖರೀದಿ ಪತ್ರ ಬರೆದುಕೊಡಲು ಸಮಯ ನೀಡಲಾಗಿತ್ತು ಎಂದರೆ ಸರಿ. ದಿನಾಂಕ 12-06-2008 ರಂದು ಮಾರಾಟಗಾರರು ಪುನಃ ರೂ.1,00,000/- ಹಣವನ್ನು ಪ್ರತಿವಾದಿಯಿಂದ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ಕುರಿತು ಮಾರಾಟಗಾರರು ಮತ್ತು ಆತನ ಹೆಂಡತಿ ಮಕ್ಕಳು ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

4. ಖರೀದಿಯ ಸಂಪೂರ್ಣ ಹಣವನ್ನು ಪ್ರತಿವಾದಿಯೇ ನೀಡಿ ದಾವಾ ಆಸ್ತಿಯನ್ನು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ನಮ್ಮಗಳ ನಡುವೆ ಯಾವುದೇ ಹಿಸ್ಸಾ ಆಗದ ಕಾರಣ ದಾವಾ ಆಸ್ತಿಯನ್ನು 2 ನೇ ಸಹೋದರ ನಮ್ಮ ಎಲ್ಲಾ ಸಹೋದರರ ಹೆಸರಿನಲ್ಲಿ ಖರೀದಿ ಪತ್ರ ಮಾಡಲಾಗಿತ್ತು ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರಿಗೆ ತಮ್ಮ ಪ್ರತಿವಾದ ಪತ್ರದಲ್ಲಿ ತೆಗೆದುಕೊಂಡಿರುವ ನಿಲುವುಗಳಿಗೆ ಒಳಪಟ್ಟು ಸುಸಂಬದ್ಧ ಪ್ರಶ್ನೆಗಳನ್ನು ಕೇಳುವಂತೆ ಸೂಚಿಸಲಾಯಿತು.)**

5. ಖರೀದಿ ಪತ್ರವನ್ನು ನಮ್ಮ ಹೆಸರಿನಲ್ಲಿ ಮೋಸದಿಂದ ಮಾಡಿಕೊಂಡು ಸಾಲ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯನ್ನು ಖರೀದಿಸಲು ನೀಡಿದ ಹಣದ ಪುರಾವೆಗೆ ಖರೀದಿ ಪತ್ರ ಮಾತ್ರ ಇರುತ್ತದೆ. ನಾನು ಹಣ ನೀಡಿರುವ ಬಗ್ಗೆ ಯಾವುದೇ ಉಲ್ಲೇಖ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ತನ್ನ ಹೆಸರಿನಲ್ಲಿ ಡಿಡಿ ತೆಗೆಸಿರುವುದಾಗಿ ನುಡಿಯುತ್ತಾರೆ. ಆ ರೀತಿ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಪ್ರತಿವಾದಿಯ ಜಂಟಿ ಹೆಸರಿನಲ್ಲಿ ಜೆ-ಫಾರಂ ಆಗಿರುವ ಕುರಿತು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಖರೀದಿ ಹಣವನ್ನು ನೀಡದ ಕಾರಣ ಆ ರೀತಿ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಆ ಕಾರಣ ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಖರೀದಿಯ ಸಮಯದಲ್ಲಿ ತಪ್ಪು ಮಾಹಿತಿ ನೀಡಿ ನಮ್ಮ ಹೆಸರಿಗೆ ಖರೀದಿ ಪತ್ರ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ವಿಷಯ ಪ್ರತಿವಾದಿಗೆ ತಿಳಿದಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.